ನನ್ನ ಪಾಪಗಳನ್ನು ತೆಗೆದುಹಾಕಲು ಸಾಧ್ಯವೇ?

ಭಾರತದಲ್ಲಿ ಅನೇಕರು ಕರ್ಮದ ನಿಯಮದ ಕೆಳಗೆ ಬದುಕುತ್ತಾರೆ. ಪ್ರತಿಯೊಂದು ಕೆಲಸವೂ ತಿರುಗಿ ನಿಮ್ಮ ಬಳಿಗೇ ಬರುತ್ತದೆ. ಒಳ್ಳೆಯದನ್ನು ಮಾಡಿದರೆ, ಒಳ್ಳೆಯದು ತಿರುಗಿ ಬರುತ್ತದೆ. ಕೆಟ್ಟದ್ದನ್ನು ಮಾಡಿದರೆ, ಕೆಟ್ಟದ್ದು ತಿರುಗಿ ಬರುತ್ತದೆ. ಈ ಲೆಕ್ಕವು ಒಂದು ಜನ್ಮದಿಂದ ಮುಂದಿನ ಜನ್ಮಕ್ಕೆ ಸಾಗುತ್ತದೆ.

ಈ ಜೀವನದ ಮಟ್ಟಿಗೆ ಇದರಲ್ಲಿ ಸ್ವಲ್ಪ ಸತ್ಯವಿದೆ. ಕ್ರೂರ ಮನುಷ್ಯನು ತಾನೇ ತುಂಬಿಸಿದ ಬಟ್ಟಲನ್ನು ಅನೇಕ ಸಾರಿ ತಾನೇ ಕುಡಿಯುತ್ತಾನೆ. ಬೈಬಲ್ ಸಹ ಇದನ್ನು ಹೇಳುತ್ತದೆ: “ಮನುಷ್ಯನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯುವನು.” (ಗಲಾತ್ಯ 6:7)

ಆದರೆ ಕರ್ಮವು ಎಂದಿಗೂ ಕ್ಷಮೆಯ ಬಗ್ಗೆ ಮಾತನಾಡುವುದಿಲ್ಲ. ಕರ್ಮವು ಲೆಕ್ಕವನ್ನು ಎಂದೆಂದಿಗೂ ತೆರೆದೇ ಇಡುತ್ತದೆ. ಅದು ಪಾಪವನ್ನು ವಿವರಿಸಬಲ್ಲದು. ಆದರೆ ಅದನ್ನು ತೊಳೆಯಲಾರದು.

ಹಾಗಾದರೆ, ಬೈಬಲ್ ಏನು ಹೇಳುತ್ತದೆ? ನನ್ನ ಪಾಪಗಳನ್ನು ನಿಜವಾಗಿಯೂ ತೆಗೆದುಹಾಕಲು ಸಾಧ್ಯವೇ?

ಮೊದಲನೆಯದಾಗಿ, ಬೈಬಲ್ ನಮ್ಮ ಬಗ್ಗೆ ಸತ್ಯವನ್ನು ಹೇಳುತ್ತದೆ: ನಾವೆಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದಲಾರದೆ ಹೋಗಿದ್ದೇವೆ. (ರೋಮಾ 3:23)

ಎರಡನೆಯದಾಗಿ, ಪಾಪಕ್ಕೆ ಎಷ್ಟು ಬೆಲೆ ಎಂಬ ಸತ್ಯವನ್ನು ಅದು ಹೇಳುತ್ತದೆ: ಪಾಪವು ನಮಗೆ ಮರಣವನ್ನು ತರುತ್ತದೆ, ನಿತ್ಯ ಮರಣವನ್ನು. (ರೋಮಾ 6:23)

ಪಾಪವು ಚಿಕ್ಕ ವಿಷಯ ಎಂದು ದೇವರು ನಟಿಸುವುದಿಲ್ಲ. ತಪ್ಪನ್ನು ಏನೂ ಇಲ್ಲದ ಹಾಗೆ ದೇವರು ನೋಡಲಾರರು (ಹಬಕ್ಕೂಕ 1:13). ಆದರೆ ನಿಮಗೆ ನೆನಪೇ ಇಲ್ಲದ ಸಾವಿರ ಜನ್ಮಗಳಲ್ಲಿ ಆ ಸಾಲವನ್ನು ತೀರಿಸುವಂತೆ ದೇವರು ನಿಮ್ಮನ್ನು ಬಿಟ್ಟುಬಿಡುವುದೂ ಇಲ್ಲ.

ಬಟ್ಟೆಯ ಮೇಲಿನ ಕಲೆಯ ಬಗ್ಗೆ ಯೋಚಿಸಿ. ನೀವು ಅದನ್ನು ತೊಳೆಯುತ್ತೀರಿ, ಮತ್ತೆ ತೊಳೆಯುತ್ತೀರಿ, ಮತ್ತೆ ತೊಳೆಯುತ್ತೀರಿ. ಕೆಲವು ಕಲೆಗಳು ಎಂದಿಗೂ ಹೋಗುವುದಿಲ್ಲ. ಕರ್ಮವು ಅಂಥ ತೊಳೆಯುವಿಕೆ. ಅದು ಎಂದಿಗೂ ಶುದ್ಧಮಾಡುವುದಿಲ್ಲ, ಎಂದಿಗೂ ಮುಗಿಯುವುದಿಲ್ಲ.

ಆದರೆ ನಿಮ್ಮ ತೊಳೆಯುವಿಕೆ ಮಾಡಲಾರದ್ದನ್ನು ದೇವರು ಮಾಡಬಲ್ಲರು. ಅವರು ಕ್ಷಮಿಸಬಲ್ಲರು. ಎಂದೆಂದಿಗೂ ಕ್ಷಮಿಸಬಲ್ಲರು.

ಹೇಗೆ? ಪಾಪವನ್ನು ಕಡೆಗಣಿಸುವ ಮೂಲಕ ಅಲ್ಲ. ಅದನ್ನು ಹೊತ್ತುಕೊಂಡು ಹೋಗಲು ತಮ್ಮ ಮಗನನ್ನು ಕಳುಹಿಸುವ ಮೂಲಕ:

> “ಆತನು ತಾನೇ ನಮ್ಮ ಪಾಪಗಳನ್ನು ತನ್ನ ದೇಹದಲ್ಲಿ ಮರದ ಮೇಲೆ ಹೊತ್ತುಕೊಂಡನು.” (1 ಪೇತ್ರ 2:24)

ಇದು ಕರ್ಮವು ತಿರುಗಿ ಕೊಡುವ ಏಟು ಅಲ್ಲ. ಏಟಿನ ಬದಲಿಗೆ ಕೊಟ್ಟ ಒಂದು ಉಡುಗೊರೆ. ಬೈಬಲ್ ಹೀಗೆ ಹೇಳುತ್ತದೆ:

> “ಆತನ ಮಗನಾದ ಯೇಸುವಿನ ರಕ್ತವು ನಮ್ಮನ್ನು ಎಲ್ಲಾ ಪಾಪದಿಂದ ಶುದ್ಧಿಮಾಡುತ್ತದೆ.” (1 ಯೋಹಾನ 1:7)

Can My Sins Be Removed?

Many people live under the idea of karma where every deed comes back to you. Do good, and good returns. Do evil, and evil returns. And sometimes these deeds carry over from death to the next life.

There is some truth in this for this life. A cruel man often drinks the cup he poured. The Bible says it too: "Whatsoever a man plants, that shall he also harvest." (Galatians 6:7)

But karma, counting my good versus my sin, never speaks of forgiveness. Karma keeps the account open forever. It can explain sin. It cannot wash it.

So, what does the Bible say? Can my sins really be removed?

First, the Bible tells us the truth about ourselves: all of us have sinned and failed to live up to the glory of God. (Romans 3:23)

Second, it tells the truth about what sin costs: it causes our death, eternal death. (Romans 6:23)

God does not pretend that sin is small. God cannot treat guilt as if it were nothing (Isaiah 59:1-2). But God also does not leave you to pay that debt across a thousand lives you cannot even remember.

Think of a stain in a garment. You wash it, and wash it, and wash it. Some stains never come out. Karma is that kind of washing. It never cleanses or finishes.

But God can do what your washing cannot do. He can forgive. Forgive forever.

How? Not by ignoring sin. By sending His Son to carry it away:

1 Peter 2:24 speaks of Jesus "who his own self carried our sins in his own body on the tree."

That is not karma balancing good and bad. This is a gift from God to forgive the sin. And the Bible says:

> "The blood of Jesus Christ his Son cleanses us from all sin." (1 John 1:7)

ದೇವರು ಪಾಪವನ್ನು ಒಳ್ಳೆಯದೆಂದು ಹೇಳುವುದಿಲ್ಲ. ಅವರು ಪಾಪವನ್ನು ಸರಿಯೆಂದು ಹೇಳುವುದಿಲ್ಲ. ಅವರು ಹೇಳಿದ ಮಾರ್ಗದಲ್ಲಿ ತಮ್ಮ ಬಳಿಗೆ ಬರುವ ಪಾಪಿಯನ್ನು ಅವರು ಕ್ಷಮಿಸುತ್ತಾರೆ.

ಅವರು ಹೇಳಿದ ಆ ಮಾರ್ಗ ಯಾವುದು? ಯೇಸುವೇ! ಸುವಾರ್ತೆಯನ್ನು ಮೊದಲ ಸಾರಿ ಸಾರಿದ ದಿನದಲ್ಲಿ, ತಾವು ಏನು ಮಾಡಬೇಕೆಂದು ಜನರು ಕೇಳಿದರು. ಪೇತ್ರನು ಅವರಿಗೆ ಹೇಳಿದನು:

> “ನೀವು ದೇವರ ಕಡೆಗೆ ತಿರುಗಿಕೊಳ್ಳಿರಿ; ನಿಮ್ಮ ಪಾಪಗಳು ಕ್ಷಮಿಸಲ್ಪಡುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬನೂ ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಲಿ.” (ಅಪೊಸ್ತಲರ ಕೃತ್ಯಗಳು 2:38)

ಪೌಲನಿಗೂ ಇದೇ ಮಾತು ಹೇಳಲ್ಪಟ್ಟಿತು:

> “ಎದ್ದು ಆತನ ಹೆಸರನ್ನು ಹೇಳಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ.” (ಅಪೊಸ್ತಲರ ಕೃತ್ಯಗಳು 22:16)

ನೀರಿನಲ್ಲಿ ಯಾವ ಮಾಯೆಯೂ ಇಲ್ಲ. ಒಬ್ಬ ವ್ಯಕ್ತಿ ದೇವರ ವಾಕ್ಯಕ್ಕೆ ವಿಧೇಯನಾದಾಗ, ಯೇಸು ಈಗಾಗಲೇ ಸುರಿಸಿದ ರಕ್ತದ ನಿಮಿತ್ತ ದೇವರು ಕ್ಷಮಿಸುತ್ತಾರೆ.

> “ತೀರಿತು” ಎಂದು ಕರ್ಮವು ಹೇಳಲಾರದು. ಯೇಸು ಹೇಳಿದರು (ಯೋಹಾನ 19:30).

ಕೊನೆಯ ಮಾತು:

ನೀವು ಹೇಗೆ ಕ್ಷಮೆ ಹೊಂದಬಹುದು ಎಂದು ಊಹಿಸಬೇಕಾಗಿಲ್ಲ. ಮರೆತುಹೋದ ಒಂದು ಕರ್ತವ್ಯವು ಅನೇಕ ವರ್ಷಗಳ ಪ್ರಯತ್ನವನ್ನು ಹಾಳುಮಾಡುತ್ತದೆ ಎಂದು ಭಯಪಡಬೇಕಾಗಿಲ್ಲ.

ನಿಮ್ಮ ಪಾಪಗಳು ತೆಗೆದುಹಾಕಲ್ಪಡಬೇಕೆಂದು ನೀವು ಬಯಸುತ್ತೀರಾ? ನೀವು ಯೇಸುವನ್ನು ನಂಬುವಿರಾ? ನೀವು ಪಶ್ಚಾತ್ತಾಪಪಟ್ಟು, ನಿಮ್ಮ ಪಾಪಗಳ ಕ್ಷಮೆಗಾಗಿ ದೀಕ್ಷಾಸ್ನಾನ (ನೀರಿನಲ್ಲಿ ಮುಳುಗಿಸುವುದು) ಮಾಡಿಸಿಕೊಳ್ಳುವಿರಾ?

ಹಾಗಾದರೆ, ಇನ್ನೂ ಸಾಲ ತೀರಿಸಲು ಪ್ರಯತ್ನಿಸುತ್ತಿರುವ ವ್ಯಕ್ತಿಯಂತೆ ಅಲ್ಲ, ತೊಳೆಯಲ್ಪಟ್ಟ ವ್ಯಕ್ತಿಯಂತೆ ಬಾಳಿರಿ.

God does not call the sin good. He does not justify the sin. He forgives the sinner who comes to Him in the way He has named.

What is that way He has named? Jesus! On the first day the gospel was preached, the people asked what they must do. Peter told them:

> "Repent, and be baptized every one of you in the name of Jesus Christ for the forgiveness of sins." (Acts 2:38)

Paul was told the same thing:

> "Arise, and be baptized, and wash away your sins, calling on the name of the Lord." (Acts 22:16)

The water has no magic in it. God forgives because of the blood Jesus already shed, when a person obeys His word.

Karma cannot say, "It is finished." Jesus did (John 19:30).

Conclusion:

You do not have to guess how you can be forgiven. You do not have to fear that one forgotten duty will undo years of being good.

Do you want your sins removed? Will you believe in Jesus? Will you repent and be baptized for the remission of your sins?

Then live as a person who has been washed, not as a person who is still trying to pay.

ಈ ಕಿರುಪುಸ್ತಕವನ್ನು ನಿಮಗೆ ಕೊಟ್ಟವರಿಗೆ ಇದು ಉಚಿತವಾಗಿ ಸಿಕ್ಕಿತು. ನಿಮಗೂ ಇದು ಉಚಿತ. ಇದಕ್ಕಾಗಿ ಎಂದಿಗೂ ಹಣ ಕೊಡಬೇಡಿ.

ಇದನ್ನು ಓದಿ. ನಿಮ್ಮ ಬೈಬಲ್ ಜೊತೆ ಇದನ್ನು ಅಧ್ಯಯನ ಮಾಡಿ. ನಂತರ ಇದನ್ನು ಬೇರೆಯವರಿಗೆ ಕೊಡಿ.

ಇನ್ನಷ್ಟು ಓದಲು, ನಿಮ್ಮ ಭಾಷೆಯಲ್ಲಿ ಕೇಳಲು, ಅಥವಾ ಪ್ರಶ್ನೆ ಕೇಳಲು ಸ್ಕ್ಯಾನ್ ಮಾಡಿ:

ನಿಮ್ಮ ಅಭಿಪ್ರಾಯ ಕೇಳಲು ನಮಗೆ ತುಂಬ ಇಷ್ಟ. ಕೋಡ್ ಸ್ಕ್ಯಾನ್ ಮಾಡಿ ನಮಗೆ ಸಂದೇಶ ಕಳುಹಿಸಿ.

ಕ್ರಿಸ್ತನ ಸಭೆಗಳಿಂದ ಒಂದು ಉಡುಗೊರೆ.

ಮಾರಾಟಕ್ಕಲ್ಲ.

This tract was given free to the person who handed it to you. It is free to you too. Never pay for it.

Read it. Study it with your Bible. Then pass it on to someone else.

Scan to read more, hear it in your language, or ask a question:
purposeandvision.org

We'd love to hear what you think. Scan the code to send us a note.

A gift from the churches of Christ.

Not for sale.